doc-427
T-P-2

(1)

Reg No B G 155

3 1 73

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಸಂವತ್ಸರಿ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಪಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [8 ಪುಟ

ಆಂಧ್ರ ಗೋಳೀಬಾರ್‌ನಲ್ಲಿ ಒಬ್ಬನ ಮರಣ

ಪ್ರತ್ಯೇಕ ತೆಲಂಗಾಣ

ಹೈದರಾಬಾದು— ಪ್ರತ್ಯೇಕ ತೆಲಂಗಾಣ ಸ್ಥಾಪನೆಗೆ 20 ಕಾಂಗ್ರೆಸ್ ಶಾಸಕರು, 8 ಮಂದಿ ಕಾಂಗ್ರೆಸ್ ಎಂ ಎಲ್ ಸಿ, 4 ಕಾಂಗ್ರೆಸ್ ಎಂ ಪಿ ಗಳು, 6 ಸ್ವತಂತ್ರ ಶಾಸಕರು, 5 ಮಂದಿ ಜಿಲ್ಲಾ ಪರಿಷತ್ ಅಧ್ಯಕ್ಷರು, ವಕೀಲರು ಪ್ರತ್ಯೇಕ ತೆಲಂಗಾಣಾಕ್ಕೆ ಒತ್ತಾಯ ಮಾಡಿರುವರು.

●

ಪ್ರಜಾಪ್ರಭುತ್ವ – ಸರ್ವಾಧಿಕಾರ

ಸೇಲಂ— ಸುದ್ದನಗರದಲ್ಲಿನ ಕಾಂಗ್ರೆಸ್ ಅಧಿವೇಶನ ಕುರಿತು ಹೇಳುತ್ತಾ, ಜನ ಸಂಘದ ಅಧ್ಯಕ್ಷ ಶ್ರೀ ವಾಜಪೇಯಿಯವರು ರಾಷ್ಟ್ರ ಮತ್ತು ಆಡಳಿತ ಪಕ್ಷ ವಿಭಾಗಿಸುವ ರೇಖೆಯು ಪೂರ್ತಿ ಅಳಿಸಲಾಗಿದೆ ಎಂದು ಈ ರೇಖೆಯನ್ನು ಸೀತಾದೇವಿಗೆ ಎಚ್ಚರಿಕೆ ಕೊಡಲು ಲಕ್ಷ್ಮಣನು ಎಳೆದಿದ್ದ ಗೆರೆಗೆ ಹೋಲಿಸುತ್ತಾ, ಈ ರೇಖೆಯನ್ನು ಪ್ರಜಾ ಪ್ರಭುತ್ವದಲ್ಲಿ ಹಾದುಹೋಗಿರುವ ಸರ್ವಾಧಿಕಾರಿ ರಾವಣನು ತನ್ನ ವಶಪಡಿಸಿಕೊಳ್ಳುವನೆಂದರು.

●

ರಾಜಾಜಿ ಸ್ಮಾರಕ

ಮದರಾಸು— ಗ್ಯಿಂಡಿಯಲ್ಲಿನ ಗಾಂಧಿ ಮಂಟಪದ ಪಕ್ಕದ ಸ್ಥಳದಲ್ಲಿ ರಾಜಾಜಿಯ ಸ್ಮಾರಕ ನಿರ್ಮಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ಪತ್ರಿಕೆಯವರಿಗೆ ತಿಳಿಸಿದರು – ಹೊಸೂರಿನ ಹತ್ತಿರ ತೋರದಳ್ಳಿಯಲ್ಲಿರುವ ರಾಜಾಜಿ ಹುಟ್ಟಿದ ಮನೆಯನ್ನು ವಶಪಡಿಸಿಕೊಂಡು, ಚೆನ್ನಾಗಿ ಇಟ್ಟಿರಲು ನಿರ್ಧರಿಸಲಾಗಿದೆ ಎಂದೂ ತಿಳಿಸಿದರು

★

● ತಾ || 14 ರಂದು ಅವಧಿ ಮುಗಿಯುವ ಇಲ್ಲಿಯ ಪುರಸಭೆಗೆ 3 ತಿಂಗಳು ಜೀವ ದಾನ ಕೊಡಲಾಗಿದೆ; ಒಬ್ಬ ಜಿಲ್ಲಾಧಿಕಾರಿ ನೇಮಕಕ್ಕೂ ಆಜ್ಞೆ ಮಾಡಲಾಗಿದೆ.

ಭತ್ತದ ಲೆವಿ

ಬೆಂಗಳೂರು– ಭತ್ತದ ಲೆವಿ ಸಡೆಯುವ ಗುರಿಯನ್ನು ಹೆಚ್ಚಿಸಬೇಕೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಹೇಳಿದರು.

★

ಸೆವಿನಾರಿನ ಸಲಹೆ

ಸಿಮ್ಲಾ— 21 ನೇ ಶತಮಾನ ಮತ್ತು ದೇಶದ ಪ್ಲಾನಿಂಗ್ ಸೆಮಿನಾರು 1 ವಾರ ನಡೆದು, ಮುಖ್ಯ ನಗರಗಳ ಬೆಳವಣಿಗೆ ತಡೆಗಟ್ಟಿಸಬೇಕೆಂದೂ, ಈಗಿರುವ ನಗರಗಳ ಅಳತೆ ಕಡಮೆಮಾಡಿ, ಮಧ್ಯಮ ಅಳತೆಯ ನಗರಗಳ ಬೆಳವಣಿಗೆಗೆ ಅನುಕೂಲವಾಗಬೇಕೆಂದು ಸಲಹೆಮಾಡಿದೆ.

○

ಲಾಟರಿ ಬಂಪರ್ ಬಹುಮಾನ

ಬೆಂಗಳೂರು— ತಾ|| 21 ರಲ್ಲಿ ತೆಗೆದ ಮೈಸೂರು ಲಾಟರಿಯಲ್ಲಿ ಬಂಪರ್ ಬಹುಮಾನ ರೂ 1 ಲಕ್ಷ ಬೆಳಗಾಂ ಜಿಲ್ಲಾ ಬೈಲಹೊಂಗಲದ ಚಿಕ್ಕ ಅಂಗಡಿ ವ್ಯಾಪಾರಿ ಶ್ರೀ ಕೃಷ್ಣಪ್ಪ ತುಕಾರಾಂ ಕಮಾಕರ್‌ಗೆ ದೊರೆತಿತ

●

ಬಂಗ್ಲಾದಲ್ಲಿ ಹರತಾಳ

ಢಾಕಾ— ನಿನ್ನೆ ಬಾಂಗ್ಲಾದೇಶದ ಹಲವಾರು ಪಟ್ಟಣಗಳಲ್ಲಿ ಹರತಾಳ ಯಶಸ್ವಿಯಾಗಿ ನಡೆಯಿತು – ಹತ್ತಾರು ಮೆರವಣಿಗೆಗಳೂ, ಪ್ರದರ್ಶನಗಳೂ, ಸಭೆಗಳೂ ನಡೆದವು – ದೇಶದಲ್ಲಿ ಕೆಲಸಕಾರ್ಯಗಳೆಲ್ಲಾ ತಣ್ಣಗಾಗಿತ್ತು.

★

ಅಭಾವಪೀಡಿತರ ಸಹಾಯಾರ್ಥ

ತೀರ್ಥಹಳ್ಳಿ— ಇಲ್ಲಿಯ ಕುರೇಶ್ ನಾಯಕರು ರೂ 5000 ಬೆಲೆಯ 85 ಚೀಲ ಭತ್ತವನ್ನು ಅಭಾವಪೀಡಿತ ಸ್ಥಳಗಳ ಜನರಿಗಾಗಿ ಉದಾರದಾನ ಮಾಡಿದ್ದಾರೆ

ಆಂಧ್ರ ಬಂದ್

ಹೈದರಾಬಾದು— ಮಂಗಳವಾರ ಆಂಧ್ರ ಬಂದ್ 12 ಜಿಲ್ಲೆಗಳಲ್ಲಿ ಪೂರ್ಣಯಶಸ್ವಿಯಾಗಿ ನಡೆಯಿತು – ಮೆರವಣಿಗೆ, ಪ್ರದರ್ಶನಗಳು, ಸಭೆಗಳು ನಡೆದವು – ಕೆಲವು ಕಡೆ ಗುಂಪುಗಳ ಹಿಂಸಾಕೃತ್ಯ ನಡೆದು, ಪೋಲೀಸರ ಗೋಳೀಬಾರು ಅನಂತಪುರ ಮತ್ತು ನೆಲ್ಲೂರು ಪಟ್ಟಣಗಳಲ್ಲೂ ನಾಗಯುಕ ಗ್ರಾಮದಲ್ಲೂ ನಡೆದು ಇಬ್ಬರು ಸತ್ತು ಹಲವರು ಗಾಯಗೊಂಡರು.

★

ಮುಖ್ಯಮಂತ್ರಿಯವರ ರಾಜೀನಾಮೆ !

ಹೈದರಾಬಾದು— ಮುಖ್ಯಮಂತ್ರಿ ಶ್ರೀ ನರಸಿಂಹರಾವ್‌ರವರು ಕಾಂಗ್ರೆಸ್ ಹೈ ಕಮ್ಯಾಂಡಿಗೆ ತಮ್ಮ ರಾಜೀನಾಮೆ ಒಪ್ಪಿಸಲಿರುವರೆಂದು ವದಂತಿ ಬಲವಾಗಿದೆ

★

ನಿವೇಶನ ಹಂಚಿಕೆ

ಶಿವಮೊಗ್ಗಾ— ರಾಜ್ಯ ಸರಕಾರ ಗ್ರಾಮಾಂತರದಲ್ಲಿ ಮನೆಯಿಲ್ಲದವರಿಗೆ 218 ಸಾವಿರ ನಿವೇಶನಗಳನ್ನು ಹಂಚಿರುವದೆಂದೂ, ಇನ್ನೆರಡು ತಿಂಗಳಲ್ಲಿ 325 ಸಾವಿರ ನಿವೇಶನಗಳನ್ನು ಹಂಚಲಾಗುವುದೆಂದೂ ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಹೇಳಿದರು.

ರಷ್ಯಾ ರಾಷ್ಟ್ರೋತ್ಸವ

ನವದೆಹಲಿ— ರಷ್ಯಾ ರಾಷ್ಟ್ರ ಸ್ಥಾಪನೆಯ 51 ನೇ ವಾರ್ಷಿಕೋತ್ಸವಕ್ಕೆ ಭಾರತ ಕಮ್ಯೂನಿಸ್ಟು ಪಾರ್ಟಿ ನಿಯೋಗವನ್ನು ಆಹ್ವಾನಿಸಿರುವದರ ಜೊತೆಗೆ, ಭಾರತ ಉಪಾಧ್ಯಕ್ಷ ಶ್ರೀ ಸಾಥಕ್ ಮತ್ತು ವಿದೇಶ ವಿಚಾರ ಮಂತ್ರಿ ಶ್ರೀ ಸ್ವರ್ಣಸಿಂಗರನ್ನು ಆಹ್ವಾನಿಸಿರುವದು ಕೆಲವು ಕಡೆ ಅಸಮಾಧಾನ ಉಂಟುಮಾಡಿದೆ.

ಅಭಾವಪ್ರದೇಶಗಳಿಗೆ ಪ್ರಧಾನಿಯರ ಭೇಟಿ

ಬೆಂಗಳೂರು— ಪ್ರಧಾನಿ ಇಂದಿರಾರವರು ರಾಜ್ಯದ ಅಭಾವ ಪೀಡಿತ ಪ್ರದೇಶಗಳಲ್ಲಿ ಮುಂದಿನ ತಿಂಗಳು ಪ್ರವಾಸ ಮಾಡುವ ಸಂಭವವಿದೆಯೆಂದು ದೆಲ್ಲಿಯಿಂದ ವಾಪಸ್ಸು ಬಂದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಪತ್ರಿಕೆಯವರಿಗೆ ತಿಳಿಸಿದರು.

ಸಂಧಾನವೇ ?

ನವದೆಹಲಿ— ಆಂಧ್ರ – ತೆಲಂಗಾಣದ ನಾಯಕರೊಡನೆ ಮಾತುಕತೆ ನಡೆಸಲು ಪ್ರಧಾನಿ ಇಂದಿರಾರವರು, ಮಂತ್ರಿಮಂಡಲದ ರಾಜಕೀಯ ವಿಚಾರ ಸಮಿತಿಯ 3 ಸದಸ್ಯರೂ ಸೇರಿ ಹಿರಿಯ ಮಂತ್ರಿಗಳನ್ನು ಇನ್ನು ಕೆಲವು ದಿವಸಗಳಲ್ಲಿ ಹೈದರಾಬಾದಿಗೆ ಕಳುಹಿಸಲಿರುವರೆಂದು ಹೇಳಲಾಗಿದೆ.

★

ಅಭಾವ ಪರಿಹಾರ ನಿಧಿಗೆ

ಪುತ್ತೂರು— ಫಿಲೋಮಿನಾ ಕಾಲೇಜಿನ ಸಮಾಜ ಸೇವಾ ಸಂಘವು ರೂ. 1034 ಶೇಖರಿಸಿ, ಮುಖ್ಯಮಂತ್ರಿಯವರ ಅಭಾವ ಪರಿಹಾರ ನಿಧಿಗೆ ಕೊಟ್ಟರು.

●

ವಿದೇಶಿ ಸಾರಾಯಿ ವಶ

ಧಾರವಾಡ— ಪೋಲೀಸರು ಕೆಲವು ಹೋಟಲುಗಳನ್ನು ಜಡ್ತಿಮಾಡಿ ರೂ. 24 ಸಾವಿರ ಬೆಲೆಯ ವಿದೇಶೀ ಸಾರಾಯಿಯನ್ನು ವಶಪಡಿಸಿಕೊಂಡು, 5 ಮಂದಿಯನ್ನು ದಸ್ತಗಿರಿ ಮಾಡಿದರು.

★

ಅಕ್ಕಿ ವಶ

ಚಿಕ್ಕಬಳ್ಳಾಪುರ— ಪೋಲೀಸರು ಈಚೆಗೆ ಎರಡು ಅಂಗಡಿಗಳನ್ನು ಶೋಧಿಸಿ, ಲೆಕ್ಕದಲ್ಲಿಲ್ಲದಿದ್ದ 57 ಮೂಟೆ ಅಕ್ಕಿಯನ್ನು ವಶಪಡಿಸಿಕೊಂಡರು

ದಾಖಲೆ

ಇಂಗ್ಲೆಂಡಿನ 67 ವಯಸ್ಸಿನ ಲೇಬ್ಯಾಟ್ ಸ್ಟೋ ಈಗ ಪೇಚಿಗೆ ಸಿಕ್ಕಿಬಿದ್ದಿದಾನೆ; ವಿವಾಹವಾಗಲು ಹೆಣ್ಣನ್ನು ಬಯಿಸಿ ಅವನು ಜಾಹಿರಾತುಮಾಡಿದ; ಅವನಿಗೆ ಈವರೆಗೆ 400 ಉತ್ತರ ಬಂದಿವೆ

ಎಲ್ಲ ಬ್ಯಾಂಕುಗಳಲ್ಲೂ ಕನ್ನಡ ಸಂಘ

ಬೆಂಗಳೂರು ನಗರದ ಎಲ್ಲಾ ಬ್ಯಾಂಕುಗಳಲ್ಲೂ ಕನ್ನಡ ಸಂಘಗಳನ್ನು ಸ್ಥಾಪಿಸಿ ಅವುಗಳಿಗೆಲ್ಲಾ ಕೇಂದ್ರ ಕನ್ನಡ ಸಂಘ ರಚಿಸುವ ಉದ್ದೇಶವನ್ನು ರಿಜರ್ವ್ ಬ್ಯಾಂಕು ಕನ್ನಡ ಸಂಘ ಇರಿಸಿಕೊಂಡಿದೆ ಎಂದು ಸಂಘದ ಅಧ್ಯಕ್ಷ ಅಧ್ಯಕ್ಷ ಶ್ರೀ ಎಸ್. ಸುಬ್ರಹ್ಮಣ್ಯಂ ಹೇಳಿದರು.

ಜೀವಂತ ಕಲೆ

ಫ್ರೆಂಕಫರ್ಟ್‌ನ ಕಲಾವಿದರೊಬ್ಬರು ಆಲ್ಪೆಲ್ ನಗರದ ಸೌಂದರ್ಯವನ್ನು ಪ್ರದರ್ಶಿಸಲು ನವೀನ ವಿಧಾನವನ್ನು ಕಂಡುಹಿಡಿದಿದ್ದಾನೆ. ಅಂತರರಾಷ್ಟ್ರೀಯ ಪುಸ್ತಕ ಪ್ರದರ್ಶನದಲ್ಲಿ ಪ್ರದರ್ಶಿಸಲು ಅವನು ಮಾಡಿರುವ ಕನ್ನೆ ಬ್ರಿಜಿಟ್ ಫಿಜೆಯಳ ದೇಹದ ಮೇಲೆ ನಗರದ ಪ್ರೇಕ್ಷಣೀಯ ಸ್ಥಳಗಳ ದೃಶ್ಯಗಳನ್ನು ಬರೆಯಲು ಹನ್ನೆರಡು ಗಂಟೆ ಹಿಡಿಯಿತು. ಈ ಜೀವಂತ ಚಿತ್ರ ಪ್ರದರ್ಶನ ಪ್ರೇಕ್ಷಕರಿಗೆ ಆಕರ್ಷಣೀಯವಾಗಿತ್ತು

ದಿವ್ಯವಾಣಿ

ತನ್ನ ಕೆಲಸಗಳನ್ನು ನಿರ್ವಹಿಸಿಕೊಳ್ಳಲು ಇತರರ ಮೇಲೆ ಉಪಯೋಗಿಸಿಕೊಳ್ಳುವವನೇ ದೊಡ್ಡ ಮನುಷ್ಯ — ಡಾ॥ ಹಯ್ಡೋಟ್.

ವುಡ್‌ಲಾಂಡ್ಸ್ 29 12 72 ರಿಂದ 3ನೇ ವಾರ

ಸೆವೆನ್ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್
ಬೆಳಗಿನ ಪ್ರದರ್ಶನ 10-30 ವೀರಸಂಕಲ್ಪ

ಅಪೆರಾ 28 12 72 ರಿಂದ

ಜಯಂತಿ ಫಿಲಂಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ರಾಮನ್ ತೇಡಿಯ ಸೀತೈ

ಪಾತ್ರ – ಎಂ. ಜಿ ರಾಮಚಂದ್ರ ಜಯಲಲಿತ ತಾಯ್‌ನಾಗೇಶ್
ವಿ. ಕೆ. ರಾಮಸ್ವಾಮಿ
ಸಂಗೀತ – ಎಂ ಎಸ್. ವಿಶ್ವನಾಥ್ ನಿರ್ದೇಶನ – ಪಿ ನೀಲಕಂಠ
ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಶೇಧವಾಗಲಿ

Protect the Cow



Help The Gorakshana

— Humanitarian Propoganda Monthly ...

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S Krishna Rao (Proprietor) at the Satvavadi Press, Chamarajapuram, Mysore 4

Contribute Liberally to the National Defence Fund